MAY 11, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಕದನ ವಿರಾಮಕ್ಕೆ**, ಭಾರತ, ಪಾಕಿಸ್ಥಾನ ಸಮ್ಮತಿ; ಎರಡೂ ರಾಷ್ಟ್ರಗಳ ಸೇನಾ ಮಹಾನಿರ್ದೇಶಕರಿಂದ, ನಾಳೆ ಮತ್ತೊಮ್ಮೆ ಸಮಾಲೋಚನೆ.
- **ರಾಜ್ಯದ ಗುಪ್ತಚರ ವ್ಯವಸ್ಥೆ ಸುದೃಢ ಗೊಳಿಸಲು**, ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ.
- **ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ**, ಜೂನ್ 1 ರಿಂದ, ಒಂದು ಲಕ್ಷ ಸಸಿ ನೆಡಲು, ಸಿದ್ಧತೆ.
- **ಇಂದು ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ.**

<><><>

**ಕದನ ವಿರಾಮಕ್ಕೆ** ಭಾರತ ಮತ್ತು ಪಾಕಿಸ್ಥಾನ ಸಮ್ಮತಿಸಿವೆ. ವಿದೇಶಾಂಗ ಕಾರ್ಯದರ್ಶಿ, ವಿಕ್ರಮ್ ಮಿಸ್ರಿ ಹೊಸ ದಿಲ್ಲಿಯಲ್ಲಿ, ವಿಶೇಷ ಸುದ್ದಿಗೋಷ್ಠಿ ನಡೆಸಿ, ನೆಲ, ಆಕಾಶ ಮತ್ತು ಸಾಗರ ಸೇರಿದಂತೆ, ಯಾವುದೇ ರೀತಿಯ ದಾಳಿಗೆ ಪರಸ್ಪರ ಮುಂದಾಗದಂತೆ, ಎರಡೂ ರಾಷ್ಟ್ರಗಳ ಸೇನಾ ಮಹಾನಿರ್ದೇಶಕರು ಮಾತುಕತೆ ನಡೆಸಿರುವುದಾಗಿ, ತಿಳಿಸಿದರು. ಎರಡೂ ರಾಷ್ಟ್ರಗಳ ಸೇನಾ ಮಹಾನಿರ್ದೇಶಕರು, ನಾಳೆ ಮಧ್ಯಾಹ್ನ 12 ಗಂಟೆಗೆ, ಮತ್ತೊಮ್ಮೆ ಸಮಾಲೋಚಿಸಲಿದ್ದಾರೆ ಎಂದು, ಅವರು ಸ್ಪಷ್ಟ ಪಡಿಸಿದರು.

<><><>

**ಕಮೊಡೋರ್ ರಘು ಆರ್.ನಾಯರ್ ಮಾತನಾಡಿ,** ತಾಯ್ನಾಡಿನ ಏಕತೆಯನ್ನು ಕಾಪಾಡುವಲ್ಲಿ, ಭಾರತೀಯ ಸೇನೆ ಕಟಿಬದ್ಧವಾಗಿದೆ. ಎಲ್ಲ ರೀತಿಯ ಪ್ರತಿರೋಧ ಕಾರ್ಯಾಚರಣೆಯನ್ನು, ತಕ್ಷಣದಿಂದ ನಿಲ್ಲಿಸುವಂತೆ ಸೂಚಿಸಲಾಗಿದೆ ಎಂದು, ಹೇಳಿದರು.

<><><>

**ಆದರೆ, ಪಾಕಿಸ್ಥಾನ ನಿನ್ನೆ** ರಾತ್ರಿ ಮತ್ತೆ ಕದನ ವಿರಾಮ ಉಲ್ಲಂಘಿಸಿದ ವರದಿಗಳು ಬಂದಿವೆ.

<><><>

**ರಾಜ್ಯದಲ್ಲಿ, ಕಾನೂನು ಸುವ್ಯವಸ್ಥೆ ಹಾಗೂ** ನಾಗರಿಕ ರಕ್ಷಣಾ ಕಾರ್ಯದ ಚಟುವಟಿಕೆಗಳನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಪರಾಮರ್ಶಿಸಿದರು. ಬೆಂಗಳೂರಿನ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಆಯೋಜಿಸಿದ್ದ, ಮಹತ್ವದ ಸಭೆಯಲ್ಲಿ, ಹಿರಿಯ ಪೊಲೀಸ್ ಅಧಿಕಾರಿಗಳು, ಸರ್ಕಾರದ ಪ್ರಮುಖರು ಪಾಲ್ಗೊಂಡಿದ್ದರು. ಮಹಾನಗರಗಳ ಪೊಲೀಸ್ ಆಯುಕ್ತರು, ಜಿಲ್ಲಾ ಪೊಲೀಸ್ ವರಿಷ್ಠರು ಹಾಗೂ ಜಿಲ್ಲಾಧಿಕಾರಿಗಳು ವಿಡಿಯೊ ಸಂವಾದದಲ್ಲಿ ಪಾಲ್ಗೊಂಡು, ಮುಖ್ಯಮಂತ್ರಿಯವರಿಗೆ ನಾಗರಿಕರ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ, ಮಾಹಿತಿ ನೀಡಿದರು. ಗುಪ್ತಚರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವಂತೆ ಹಾಗೂ ಸುಳ್ಳು ಸುದ್ದಿಗಳ ಮೇಲೆ ನಿಗಾವಹಿಸುವಂತೆ, ಅವರು ಸೂಚಿಸಿದರು.

<><><>

**'ಕಲ್ಯಾಣ ಪಥ' ಹಾಗೂ 'ಪ್ರಗತಿ ಪಥ'** ರಾಜ್ಯ ಸರ್ಕಾರದ ಮಹತ್ವದ ಯೋಜನೆಗಳಾಗಿವೆ; ಗ್ರಾಮೀಣ ಬದುಕಿನ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಬಲ್ಲ ಈ ರಸ್ತೆಗಳನ್ನು, ಗುಣಮಟ್ಟ ಖಾತ್ರಿಯೊಂದಿಗೆ ನಿರ್ಮಿಸುವಂತೆ, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಪಂಚಾಯತ್ ರಾಜ್ ಇಲಾಖೆ ಅಭಿಯಂತರರಿಗೆ, ಸೂಚಿಸಿದ್ದಾರೆ. ವಿಧಾನಸೌಧದಲ್ಲಿ, ಅವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಕಲ್ಯಾಣ ಪಥ ಯೋಜನೆಗಾಗಿ, ಸಾವಿರ ಕೋಟಿ ರೂಪಾಯಿ ಹಾಗೂ ಪ್ರಗತಿ ಪಥ ಯೋಜನೆಗಾಗಿ, 5 ಸಾವಿರದ 200 ಕೋಟಿ ರೂಪಾಯಿ ಅನುದಾನ ಒದಗಿಸಲಾಗಿದೆ ಎಂದರು.

<><><>

**ಸಭೆಗೆ ಮಾಹಿತಿ ನೀಡಿದ ಅಧಿಕಾರಿಗಳು,** ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆ, ಅನುಮೋದನೆ ನೀಡಲು, ಏಷ್ಯಾ ಅಭಿವೃದ್ಧಿ ಬ್ಯಾಂಕಿಗೆ ಸೂಚಿಸಿದೆ. ಪೂರ್ಣ ಯೋಜನಾ ವರದಿ, ಇಲಾಖೆ ಸಿದ್ಧ ಪಡಿಸುತ್ತಿದೆ ಎಂದರು.

<><><>

**ಬಸ್ ನಿಲ್ದಾಣಗಳ ಸ್ವಚ್ಛತೆ ನಿರ್ವಹಿಸಲು** ಹಾಗೂ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸಿಬ್ಬಂದಿ, ಸಾರ್ವಜನಿಕರೊಂದಿಗೆ ಗೌರವದಿಂದ ನಡೆದುಕೊಳ್ಳಲು ಅನುವಾಗುವಂತೆ, ಕ್ವಿಕ್ ರೆಸ್ಪಾನ್ಸ್ ಕೋಡ್ ಅಳವಡಿಸಲಾಗಿದೆ ಎಂದು, ಸಾರಿಗೆ ಸಂಸ್ಥೆ ಅಧ್ಯಕ್ಷ ಭರಮಗೌಡ ಕಾಗೆ ತಿಳಿಸಿದ್ದಾರೆ. "ನಮ್ಮ ಬಸ್ ನಿಲ್ದಾಣ, ಸ್ವಚ್ಛ ನಿಲ್ದಾಣ" ಶೀರ್ಷಿಕೆ ಅಡಿ, ಬಸ್ ನಿಲ್ದಾಣದ ನಿರ್ವಹಣೆಯ ಬಗ್ಗೆ, ಸಾರ್ವಜನಿಕರ ಅಭಿಪ್ರಾಯ ಪಡೆಯಲು, ಕ್ಯೂ.ಆರ್. ಕೋಡ್ ಮುದ್ರಿತ ಭಿತ್ತಿಪತ್ರವನ್ನು, ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿ ಮಾತನಾಡಿದರು. ಉಪಾಧ್ಯಕ್ಷರಾದ ಪೀರಸಾಬ್ ಕೌತಾಳ್ ಮಾತನಾಡಿ, ಪ್ರಯಾಣಿಕರು ಕ್ಯೂ.ಆರ್. ಕೋಡ್‌ನ್ನು ಸ್ಕ್ಯಾನ್ ಮಾಡಿ, ಲಿಂಕ್ ನಲ್ಲಿ ತಮ್ಮ ಅಭಿಪ್ರಾಯ ದಾಖಲಿಸಿ, ನೊಂದಾಯಿತ ಇ ಮೇಲ್ ಐಡಿ ಮೂಲಕ, ಸಂದೇಶ ಕಳುಹಿಸಿದ ಆಧಾರ ಮೇಲೆ, ಮೌಲ್ಯಾಂಕನ ಮಾಡಲಾಗುತ್ತದೆ, ಎಂದರು.

<><><>

**ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು,** ಶೇಕಡ 10 ಕ್ಕಿಂತ ಕಡಿಮೆ ಅರಣ್ಯ ಪ್ರದೇಶ ಹೊಂದಿರುವ ಜಿಲ್ಲೆಗಳ ಪಟ್ಟಿಯಲಿವೆ; ಹಸಿರು ಹೊದಿಕೆ ಹೆಚ್ಚಿಸಲು, ಜೂನ್ 1 ರಿಂದ, ಒಂದು ಲಕ್ಷ ಸಸಿ ನೆಡಲು, ಯೋಜಿಸಲಾಗಿದೆ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಕಲಬುರಗಿಯ ಐವಾನ್–ಎ–ಶಾಹಿ ಅಥಿತಿ ಗೃಹದಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು. ಚಿತ್ತಾಪುರದ ಮಾಡಬೂಳದಲ್ಲಿ, 60 ಕೋಟಿ ರೂಪಾಯಿ ವೆಚ್ಚದಲ್ಲಿ, 40 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾದ, ಪ್ರಾಣಿ ಸಂಗ್ರಹಾಲಯ ಕಾಮಗಾರಿ, ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಲಿದ್ದು, ಮುಖ್ಯಮಂತ್ರಿ ಲೋಕಾರ್ಪಣೆ ಮಾಡಲಿದ್ದಾರೆ ಎಂದು, ಸಚಿವರು ಹೇಳಿದರು.

<><><>

**ಜೀವನೋಪಾಯ ಖಾತೆ ಸಚಿವ** ಶರಣಪ್ರಕಾಶ ಪಾಟೀಲ ಮಾತನಾಡಿ, ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ, ಈಗಾಗಲೇ 5 ಸಾವಿರದ 530 ಶಿಕ್ಷಕರ ನೇಮಕಾತಿಯಾಗಿದೆ. ಪರಿಶಿ ್ಟ ಜಾತಿ ಒಳ ಮೀಸಲಾತಿ ಕಾರಣ, ಆದೇಶಿಸಲು ವಿಳಂಬವಾಗಿದೆ ಎಂದರು.

<><><>

**ಇಂದು ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ.** 'ಸುಸ್ಥಿರ ನಾಳೆಗಳನ್ನು ಆವಿಷ್ಕಾರಗಳ ಮೂಲಕ ಸಶಕ್ತಗೊಳಿಸುವುದು' ಎಂಬ, ಧ್ಯೇಯದೊಂದಿಗೆ ಆಚರಿಸಲಾಗುತ್ತಿದೆ. 1998ರ ಮೇ 11 ಹಾಗೂ 13 ರಂದು ಪೋಖರಣದಲ್ಲಿ, ಭಾರತ ಕೈಗೊಂಡ ಯಶಸ್ವಿ ಪರಮಾಣು ಪರೀಕ್ಷೆಯ, ಗಮನಾರ್ಹ ತಾಂತ್ರಿಕ ಸಾಧನೆಯನ್ನು ಸಂಭ್ರಮಿಸಲು, ಈ ದಿನ ಮೀಸಲು.

<><><>

**ಸೃಜನಶೀಲತೆ, ನಾವಿನ್ಯತೆ ಮತ್ತು** ಸುಸ್ಥಿರ ತಾಂತ್ರಿಕ ಪ್ರಗತಿಯನ್ನು ಪೋಷಿಸಲು, ರಾಂಚಿಯಲ್ಲಿರುವ ಮೆಸ್ರಾದ, ಇನ್‌ಸ್ಟಿಟ್ಯೂಷನ್ಸ್ ಇನ್ನೋವೇಷನ್ ಕೌನ್ಸಿಲ್– ಬಿ.ಐ.ಟಿ. ನಿರಂತರವಾಗಿ ಪ್ರಯತ್ನಿಸುತ್ತಿದೆ.

<><><>

**ಕೃಷಿ ಇಳುವರಿಯನ್ನು** ಗಣನೀಯವಾಗಿ ಹೆಚ್ಚಿಸಲು, ರೈತ ವಿಜ್ಞಾನಿಗಳ ಕೃಷಿ ಶೋಧನೆ, ಅನುಶೋಧನೆ, ಸರಳ ತಂತ್ರಜ್ಞಾನ ಹಾಗೂ ಕೃಷಿ ತಾಂತ್ರಿಕತೆ ಪ್ರಮುಖ ಪಾತ್ರ ವಹಿಸುತ್ತದೆ.

<><><>

**ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕು,** ಕಾನಕೊಡ್ಲು ಗ್ರಾಮದ ಪ್ರಯೋಗಶೀಲ ಕೃಷಿಕ, ಪ್ರಸಾದ ರಾಮ ಹೆಗಡೆ, 12ಕ್ಕೂ ಹೆಚ್ಚು ಯಂತ್ರಗಳನ್ನು ಬಳಸಿ, ತೋಟದಲ್ಲಿ ಕೃಷಿ ತಾಂತ್ರಿಕತೆಗೆ ಒತ್ತು ನೀಡಿದ್ದಾರೆ. ರಾಷ್ಟ್ರೀಯ ತಂತ್ರಜ್ಞಾನ ದಿನವಾದ ಇಂದು, ನೆಲಮೂಲದ ತಾಂತ್ರಿಕತೆ ಬಳಕೆಗೆ ರೈತರು ಒತ್ತು ನೀಡುವಂತೆ ಅವರು, ಕೋರಿದ್ದಾರೆ.

<><><>

**ರಾಜ್ಯ ಅರಣ್ಯ ಇಲಾಖೆ ಹಾಗೂ ಬೆಂಗಳೂರಿನ** ಹೊಳೆಮತ್ತಿ ನೇಚರ್ ಫೌಂಡೇಷನ್ ಜೊತೆಗೂಡಿ, 'ಜೀವನದಿ ಕಾವೇರಿ' ಸಾಕ್ಷ್ಯಚಿತ್ರ ರೂಪಿಸಿವೆ. ಚಾಮರಾಜನಗರ ಜಿಲ್ಲೆಯ, ಮಲೈ ಮಹದೇಶ್ವರ ಹಾಗೂ ಕಾವೇರಿ ವನ್ಯಜೀವಿ ಧಾಮದಲ್ಲಿ, 4 ವರ್ಷಗಳ ಕಾಲ, ಈ ಸಾಕ್ಷ್ಯಚಿತ್ರವನ್ನು ಚಿತ್ರಿಸಲಾಗಿದೆ. ಏಷ್ಯಾದ ಆನೆಗಳ ಬದುಕು, ಬವಣೆಗಳಿಗೆ ಸಾಕ್ಷ್ಯಚಿತ್ರದಲ್ಲಿ ಒತ್ತು ನೀಡಲಾಗಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹೊಳೆಮತ್ತಿ ನೇಚರ್ ಫೌಂಡೇಷನ್ ಸಂಸ್ಥಾಪಕ ಕಾರ್ಯಾಧ್ಯಕ್ಷ, ವನ್ಯಜೀವಿ ಸಂರಕ್ಷಣಾ ತಜ್ಞ, ಸಂಜಯ್ ಗುಬ್ಬಿ.

<><><>

**ಮೂರು ದಿನಗಳ ಹಿಂದೆ ನಾಪತ್ತೆಯಾಗಿದ್ದ,** ಕೃಷಿ ವಿಜ್ಞಾನಿ, ಮತ್ಸ್ಯ ಕ್ರಾಂತಿಯ ಹರಿಕಾರ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಎಸ್.ಅಯ್ಯಪ್ಪನ್, ನಿಗೂಢ ರೀತಿಯಲ್ಲಿ ಮೃತಪಟ್ಟಿದ್ದಾರೆ. ಅವರಿಗೆ 70 ವರ್ಷ ವಯಸ್ಸಾಗಿತ್ತು. ಅವರ ಮೃತದೇಹ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣದ ಕಾವೇರಿ ನದಿ ಪಶ್ಚಿಮ ವಾಹಿನಿಯಲ್ಲಿ ಪತ್ತೆಯಾಗಿದೆ.ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ನಿವೃತ್ತ ನಿರ್ದೇಶಕರಾಗಿದ್ದ, ಪ್ರೊಫೆಸರ್ ಅಯ್ಯಪ್ಪನ್ ಮೈಸೂರು ನಗರದ ವಿದ್ಯಾರಣ್ಯಪುರಂ ನಿವಾಸಿಯಾಗಿದ್ದರು. ಮೂಲತಃ ಚಾಮರಾಜನಗರ ಜಿಲ್ಲೆ, ಯಳಂದೂರು ತಾಲೂಕಿನ, ಆಲ್ಕೆರೆ ಅಗ್ರಹಾರದವರು. ಪಾರ್ಥಿವ ಶರೀರದ ಅಂತ್ಯಕ್ರಿಯೆ, ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಇಂದು ಜರುಗಲಿದೆ. ಗಣ್ಯರು ಸಂತಾಪ ವ್ಯಕ್ತ ಪಡಿಸಿದ್ದಾರೆ.

<><><>

**ಉತ್ತರಪ್ರದೇಶದ, ಆಚಾರ್ಯ ನರೇಂದ್ರದೇವ್ ಕೃಷಿ** ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ, ಅಖಿಲ ಭಾರತ ಅಂತರ್ ಕೃಷಿ ವಿಶ್ವವಿದ್ಯಾಲಯಗಳ, 22ನೇ ಕ್ರೀಡಾಕೂಟದಲ್ಲಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, ಮಹಿಳಾ ಹಾಗೂ ಪುರ ’ರ ವಿಭಾಗದ ಕ್ರೀಡಾಪಟುಗಳು, ಸಮಗ್ರ ವೀರಾಗ್ರಣಿ ಪುರಸ್ಕಾರಕ್ಕೆ, ಭಾಜನರಾಗಿದ್ದಾರೆ. ಮಹಿಳಾ ಕ್ರೀಡಾಪಟುಗಳು, 8 ಚಿನ್ನ, 3 ಬೆಳ್ಳಿ ಹಾಗೂ 3 ಕಂಚಿನ ಪದಕಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಬ್ಯಾಸ್ಕೆಟ್ ಬಾಲ್ ಹಾಗೂ ಬ್ಯಾಡ್ಮಿಂಟನ್ ಸ್ಪರ್ಧೆಗಳಲ್ಲಿ ಚಿನ್ನದ ಪದಕ, ಪುರು ’ರ ತಂಡ, ವಾಲಿಬಾಲ್ ಹಾಗೂ ಬ್ಯಾಡ್ಮಿಂಟನ್ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಗಳಿಸಿ, ಸಮಗ್ರ ಚಾಂಪಿಯನ್ ಆಗಿ, ಹೊರಹೊಮ್ಮಿದೆ.

<><><>

**ಈ ಕ್ರೀಡಾಕೂಟದಲ್ಲಿ,** ರಾಷ್ಟ್ರದ 56ಕ್ಕೂ ಹೆಚ್ಚು ಕೃಷಿ ವಿಶ್ವವಿದ್ಯಾಲಯಗಳಿಂದ, 2 ಸಾವಿರ ಕ್ರೀಡಾಪಟುಗಳು ಭಾಗವಹಿಸಿದ್ದರು.

<><><>

- **ಕದನ ವಿರಾಮಕ್ಕೆ,** ಭಾರತ, ಪಾಕಿಸ್ಥಾನ ಸಮ್ಮತಿ; ಎರಡೂ ರಾಷ್ಟ್ರಗಳ ಸೇನಾ ಮಹಾನಿರ್ದೇಶಕರಿಂದ, ನಾಳೆ ಮತ್ತೊಮ್ಮೆ ಸಮಾಲೋಚನೆ.
- **ರಾಜ್ಯ ಗುಪ್ತಚರ ವ್ಯವಸ್ಥೆ ಸುದೃಢ ಗೊಳಿಸಲು,** ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ.
- **ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ,** ಜೂನ್ 1 ರಿಂದ, ಒಂದು ಲಕ್ಷ ಸಸಿ ನೆಡಲು, ಸಿದ್ಧತೆ.
- **ಇಂದು ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ.**

<><><>